

# ಗಣೇಶನ ಜನ್ಮಸ್ಥಳದ ಸನ್ನಿಧಿಯಲ್ಲಿ...

**‘ದೋಡಿತಾಲ್–ದರ್ವಾ ಪಾಸ್’ ಚಾರಣ ಮನುಷ್ಯನಿಗೆ ಪ್ರಕೃತಿಯ ಅಮೋಘ ಚೆಲುವಿನ ದರ್ಶನ ಮಾಡಿಸುವ ಯಾತ್ರೆ. ದೇಹ–ಮನಸ್ಸಿಗೆ ಹುಮ್ಮಸ್ಸು ತುಂಬುವ ನಿಸರ್ಗದ ಔಷಧವೂ ಹೌದು.**

■ ಜಿ. ನಾಗೇಂದ್ರ ಕಾವೂರು

ಉತ್ತರಾಖಂಡ ರಾಜ್ಯದ ಉತ್ತರಕಾಶಿ ಜಿಲ್ಲೆಯಲ್ಲಿರುವ ‘ದೋಡಿತಾಲ್ ಸರೋವರ’, ಸಮುದ್ರ ಮಟ್ಟದಿಂದ ಸುಮಾರು 3024 ಮೀಟರ್ (9921 ಅಡಿ) ಎತ್ತರದಲ್ಲಿದೆ. 1.5 ಕಿ.ಮೀ. ಸುತ್ತಳತೆಯ ‘ದೋಡಿತಾಲ್’ ಸರೋವರವನ್ನು ಭಾರತದ ಅತ್ಯಂತ ಸುಂದರ ಸರೋವರವೆಂದು ಪರಿಗಣಿಸಲಾಗಿದ್ದು ಪ್ರಕೃತಿಪ್ರಿಯರನ್ನು ಆಕರ್ಷಿಸುವ ತಾಣ.

ಪುರಾಣದ ಪ್ರಕಾರ ‘ದೋಡಿತಾಲ್’, ಗಣೇಶನ ಜನ್ಮಸ್ಥಳ. ದೋಡಿತಾಲ್ ಸರೋವರದಲ್ಲಿ ಪಾರ್ವತಿ ದೇವಿ ಸ್ನಾನ ಮಾಡಿದಳೆಂದು, ಗಣೇಶ ಜನ್ಮತಳೆದ ಸ್ಥಳ ಇದಾಗಿದ್ದು, ಈಶ್ವರ ಗಣೇಶನ ಶಿರಚ್ಛೇದ ಮಾಡಿ ನಂತರ ಆನೆ ಮುಖ ಜೋಡಿಸಿದ ಘಟನೆ ಇಲ್ಲೇ ನಡೆಯಿತೆಂದು ಹೇಳುತ್ತಾರೆ ಕೆಲವರು. ಸರೋವರದ ಸಮೀಪ ಗಣೇಶನಿಗಾಗಿ ನಿರ್ಮಿಸಿದ ದೇವಾಲಯ ಹಾಗೂ ಸ್ನಾನ ಮಾಡಿದ ನಂತರ ಪಾರ್ವತಿ ದೇವಿ ಬಟ್ಟೆ ಬದಲಾಯಿಸಿದ ಗುಹೆ ಎಂದು ಹೇಳಲಾದ ಸ್ಥಳವನ್ನು ಇಂದಿಗೂ ನೋಡಬಹುದು.

ಅಪರೂಪದ ಮೀನಿನ ಪ್ರಭೇದ ‘ಹಿಮಾಲಯನ್ ಗೋಲ್ಡನ್ ಟ್ರೌಟ್ ಸರೋವರದಲ್ಲಿದ್ದರೂ ಈ ಮೀನುಗಳನ್ನು ಯಾರೂ ಹಿಡಿಯುವುದಿಲ್ಲ. ‘ಹಿಮಾಲಯನ್ ಟ್ರೌಟ್’ ಮೀನಿಗೆ ಸ್ಥಳೀಯವಾಗಿ ‘ದೋಡಿ’ ಎಂಬ ಹೆಸರಿದೆಯಂತೆ. ಹಾಗಾಗಿ ‘ದೋಡಿ’ ವಾಸವಿರುವ ಈ ಸರೋವರ (ತಾಲ್) ವನ್ನು ‘ದೋಡಿತಾಲ್’ ಎಂದು ಕರೆಯುತ್ತಾರೆಂದು ಸ್ಥಳೀಯರು ಹೇಳುತ್ತಾರೆ.

ದರ್ವಾ ಪಾಸ್ ಸಮುದ್ರ ಮಟ್ಟದಿಂದ 4150 ಮೀಟರ್ (13,615ಅಡಿ) ಎತ್ತರದಲ್ಲಿದೆ. ದರ್ವಾ ಪಾಸ್ ಮೂಲಕ ಗಂಗಾ ಮತ್ತು ಯಮುನಾ ನದಿ ಕಣಿವೆಗಳನ್ನು ತಲುಪಬಹುದು. 6 ದಿನಗಳ ದೋಡಿತಾಲ್–ದರ್ವಾ ಪಾಸ್ ಚಾರಣದಲ್ಲಿ ಉತ್ತರಕಾಶಿ ನಮ್ಮ ಬೇಸ್ ಕ್ಯಾಂಪ್. ಚಾರಣದ ಮೊದಲ ದಿನ ಬೆಳಿಗ್ಗೆ 16 ಚಾರಣಿಗರ ತಂಡ ಉತ್ತರಕಾಶಿಯಿಂದ ಅಗೋಡ ಗ್ರಾಮಕ್ಕೆ ವಾಹನದ ಮೂಲಕ ತೆರಳಿದೆವು. ಇಲ್ಲಿಂದ 18 ಕಿ.ಮೀ. ದೂರ ಮತ್ತು ಸಮುದ್ರ ಮಟ್ಟದಿಂದ 9,921 ಅಡಿ ಎತ್ತರದಲ್ಲಿರುವ ‘ದೋಡಿತಾಲ್ ಸರೋವರವನ್ನು ಚಾರಣದ ಮೂಲಕವೇ ತಲುಪಬೇಕು.

ಅಗೋಡ ಗ್ರಾಮದಿಂದ ನಮ್ಮ ತಂಡದ ಚಾರಣ ಪ್ರಾರಂಭವಾಯಿತು. ಸುತ್ತಲೂ ಬೆಟ್ಟಗುಡ್ಡಗಳಿಂದ ಆವೃತವಾಗಿರುವ ಕುಗ್ರಾಮ ಅಗೋಡದಲ್ಲಿ ಬೆಟ್ಟಗಳನ್ನು ಹಂತ ಹಂತವಾಗಿ ಸಮತಟ್ಟು ಮಾಡಿ ಅಲ್ಲಲ್ಲಿ ಮನೆಗಳನ್ನು ನಿರ್ಮಿಸಿದ್ದಾರೆ. ಸ್ಟೆಪ್ ಫಾರ್ಮಿಂಗ್ ಇಲ್ಲಿನ ವಿಶೇಷತೆ. ಉತ್ತರಕಾಶಿ ಜಿಲ್ಲೆಯಲ್ಲಿ ಭತ್ತ, ಗೋಧಿ, ಬಾರ್ಲಿ, ಸಿರಿಧಾನ್ಯಗಳನ್ನು ಬೆಳೆಯುತ್ತಾರಾದರೂ ಇಲ್ಲಿ ಹೆಚ್ಚಾಗಿ ಆಲೂಗೆಡ್ಡೆಗಳನ್ನು ಬೆಳೆಯುತ್ತಾರೆ. ಈ ಹಳ್ಳಿಯಲ್ಲಿ ಕೇವಲ ಒಂದು ಅಂಗಡಿ ಹಾಗೂ ಸುಮಾರು ನೂರು ಮನೆಗಳಿವೆ. ಸ್ಥಳೀಯವಾಗಿ ಲಭ್ಯವಿರುವ ಕಲ್ಲಿನ ತೆಳುವಾದ ಪದರಗಳನ್ನೇ ಮನೆಯ ಮೇಲ್ಹಾವಣಿಗೆ ಉಪಯೋಗಿಸುತ್ತಾರೆ. ಹೀಗೆ ನಿರ್ಮಿಸಲಾದ ಮನೆಯಲ್ಲಿ ಧಾನ್ಯಗಳನ್ನು ಸಂಗ್ರಹಿಸುತ್ತಾರೆ. ಮನೆಯ ಮೇಲೆ ಮಂಜು ಸಂಗ್ರಹಗೊಂಡು ಮಂಜುಗಡ್ಡೆಯಾದರೂ ಧಾನ್ಯಗಳು ಕೆಡುವುದಿಲ್ಲವಂತೆ.

ನಮ್ಮ ಮೊದಲ ಕ್ಯಾಂಪ್ ಅಗೋಡದಿಂದ ಸುಮಾರು 3 ಕಿ.ಮೀ. ದೂರದಲ್ಲಿರುವ ಬೆಬ್ರಾ ಗ್ರಾಮದಲ್ಲಿ. ಬೆಟ್ಟಗುಡ್ಡಗಳ ಪಕ್ಕದಲ್ಲಿರುವ ಅಗಲ–ಕಿರಿದಾದ ರಸ್ತೆಯಲ್ಲಿ ಸಾಗಿದೆವು. ಮುಗಿಲೆತ್ತರಕ್ಕೆ ಚಾಚಿರುವ ಬೆಟ್ಟಗಳಲ್ಲಿ ಹಸುರಿನಿಂದ ಕಂಗೊಳಿಸುತ್ತಿರುವ, ಎತ್ತರಕ್ಕೆ ನೇರವಾಗಿ ಬೆಳೆದಿರುವ ದೇವದಾರು ಮರಗಳು, ಬೆಟ್ಟಗಳ ಮೇಲಿನ ಹಿಮ ಕರಗಿ ಏರ್ಪಟ್ಟಿರುವ ಸಣ್ಣ ಜಲಪಾತಗಳು ಅಲ್ಲಲ್ಲಿ ಕಾಣಸಿಕ್ಕವು.

ಒಂದೆರಡು ಕಿ.ಮೀ. ಕ್ರಮಿಸಿದ ನಂತರ ದಯಾರಾ ಬುಗ್ಯಾಲ್ ಮತ್ತು ಬಕಾರಿ ಪರ್ವತದ ಶಿಖರಕ್ಕೆ ಹೋಗುವ ದಾರಿ ದೂರದಲ್ಲಿ ಕಾಣುತ್ತಿತ್ತು. ಬೆಬ್ರಾ ಗ್ರಾಮ ಸಮೀಪಿಸುತ್ತಿದ್ದಂತೆ ಕೇಳಿಬರುತ್ತಿದ್ದ ನೀರಿನ ಝುಳು ಝುಳು ನಾದ, ಹರಿಯುತ್ತಿದ್ದ ನದಿಯ ನೀರಿನ ಪ್ರಮಾಣ ನೋಡುವ ಉತ್ಸುಕತೆ ಮೂಡಿಸಿತ್ತು. ನಮ್ಮ ಚಾರಣದ ಮೊದಲನೇ ಶಿಬಿರವಾದ ಬೆಬ್ರಾ ಶಿಬಿರ ತಲುಪಲು ನದಿಗೆ ಅಡ್ಡಲಾಗಿ ಕಟ್ಟಿಗೆಗಳಿಂದ ನಿರ್ಮಿಸಲಾದ ಸೇತುವೆ ಮೂಲಕ ಸಾಗಬೇಕಾಗಿತ್ತು. ಕೆಲವರು ನದಿಯ ನೀರಿನಲ್ಲೇ ನಡೆದು ಶಿಬಿರ ತಲುಪಿದರು. ಪರ್ವತದಲ್ಲಿನ ಹಿಮ ಕರಗಿ ನದಿಯಾಗಿ ಪ್ರವಹಿಸುತ್ತಿತ್ತು. ಮಾರನೇ ದಿನ ನಮ್ಮ ಮುಂದಿನ ಶಿಬಿರಕ್ಕೆ ಹೋಗುವ ಕಾರ್ಯಕ್ರಮವಿದ್ದುದರಿಂದ ನಮಗಾಗಿ ಏರ್ಪಡಿಸಲಾಗಿದ್ದ ಮನೆಯಲ್ಲಿ ತಂಗಿದೆವು. ವಿದ್ಯುತ್ ಸಂಪರ್ಕವಿಲ್ಲದ ಕಾರಣ ಸಂಜೆ ಆರೂವರೆಗೆ ಊಟ ಮುಗಿಸಿ, ದಿನದ ಚಾರಣದ ಅನುಭವಗಳನ್ನು ಮೆಲಕು ಹಾಕುತ್ತಾ, ನದಿಯ ಜೋಗುಳದ ಹಿನ್ನೆಲೆಯಲ್ಲಿ ನಿದ್ದೆಗೆ ಜಾರಿದೆವು.